**Code No. 08 X(A)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜನವರಿ / ಫೆಬ್ರವರಿ, 2020

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಒಂದು ವಿಶಾಲವಾದ ಕಾಡಿನಲ್ಲಿ ಸುಂದರವಾದ ಜಿಂಕೆಯೊಂದಿತ್ತು. ಬಹು ದಿನಗಳ ನಂತರ ಅದಕ್ಕೊಂದು ಮರಿ ಜಿಂಕೆಯು ಹುಟ್ಟಿತು. ಅದು ಕೂಡ ಅಮ್ಮನಷ್ಟೇ ಸುಂದರವಾಗಿತ್ತು. ಜಿಂಕೆ ಮರಿಯು ಅಮ್ಮನ ಹಿಂದೆಯೇ ಸುತ್ತುತ್ತಾ ಕಾಡಿನಲ್ಲಿ ಅಲೆಯುತ್ತಿತ್ತು. ತರ್ಲೆ ತರ್ಲೆ ಪ್ರಶ್ನೆಗಳನ್ನು ಕೇಳುತ್ತಿತ್ತು. ತಾಯಿ ಜಿಂಕೆ ರೇಗದೆ ತನ್ನ ಮರಿಗೆ ಸಮಾಧಾನದಿಂದ, ಉತ್ತರವನ್ನು ನೀಡುತ್ತಿತ್ತು. ಒಂದು ದಿನ ತಾಯಿ ಮತ್ತು ಮರಿ ಜಿಂಕೆ ಅಲೆಯುತ್ತ ಕಾಡಿನ ಅಂಚಿಗೆ ಬಂದವು. ಮರಿ ಜಿಂಕೆ ಹೊರಗಿನ ಪರಿಸರವನ್ನು ಕುತೂಹಲದಿಂದ ನೋಡಿತು. ದೂರದಲ್ಲಿ ಮನೆಗಳು ಇರುವುದನ್ನು ಕಂಡು ಬಹಳ ಕುತೂಹಲದಿಂದ ಅಮ್ಮಾ ಅದೇನು ಅಂತ ಕೇಳಿತು. ತಾಯಿ ಜಿಂಕೆ ಮಗು ಅದೊಂದು ಊರು. ಅವು ಮನೆಗಳು. ಅಲಿ ಮನುಷ್ಯರು ವಾಸಿಸುತ್ತಾರೆ ಅಂತ ಹೇಳಿತು. ಅದಕ್ಕೆ ಮರಿ ಜಿಂಕೆ ಮನುಷ್ಯರು ಹೇಗಿರುತ್ತಾರೆ, ಏನು ಮಾಡುತ್ತಾರೆ, ನಾನು ನೋಡಬೇಕು ಅಂತ ಹಠ ಹಿಡಿಯಿತು. ತಾಯಿ ಜಿಂಕೆ ಮರಿಯನ್ನು ಕರೆದುಕೊಂಡು ಊರ ಕಡೆ ಹೊರಟಿತು.

ಊರು ಹತ್ತಿರವಾಗುತ್ತಲೇ ಹಾದಿಯಲ್ಲಿ ಇಬ್ಬರು ವೃದ್ಧ ದಂಪತಿಗಳು ಅಳುತ್ತಾ ಬರುತ್ತಿದ್ದರು. ಇವರಾ ಮನುಷ್ಯರೆಂದರೆ, ಯಾಕೆ ಅಳುತ್ತಿದ್ದಾರೆ, ಅಂತ ಮರಿ ಜಿಂಕೆ ಕೇಳಿತು. ಅದಕ್ಕೆ ತಾಯಿ, ಹೌದು ಮಗು ಇವರೇ, ಇವರಿಗೆ ತುಂಬಾ ವಯಸ್ಸಾಗಿದೆ. ಇವರ ಮಕ್ಕಳು ಮನೆಯಿಂದ ಇವರನ್ನು ಹೊರ ಹಾಕಿರಬೇಕು, ಅದಕ್ಕೆ ಅಳುತ್ತಾ ರಸ್ತೆಯಲ್ಲಿ ಹೋಗುತ್ತಿದ್ದಾರೆ ಎಂದು ಹೇಳಿತು. ಮರಿ ಜಿಂಕೆಯ ಮುಖದಲ್ಲಿ ಗಾಬರಿ ಮೂಡಿತು, ಅವರು ಊರಿನ ಹತ್ತಿರಕ್ಕೆ ಹೋದರು. ಅಲ್ಲೊಬ್ಬ ತಾಯಿ ತನ್ನ ಮಗುವನ್ನು ಹಿಡಿದುಕೊಂಡು

ಹೊಡೆಯುತ್ತಿದ್ದಳು. ಮರಿ ಜಿಂಕೆ ಅಮ್ಮನ ಕಡೆ ತಿರುಗಿ ಯಾಕೆ ಅನ್ನುವಂತೆ ನೋಡಿತು. ತನ್ನ ಮಗನು ಪರೀಕ್ಷೆಯಲ್ಲಿ ಸರಿಯಾಗಿ ಮಾರ್ಕ್ಸ್ ತೆಗೆದಿಲ್ಲ, ಪಾಠವನ್ನು ಕಲಿಯುತ್ತಿಲ್ಲವೆಂದು ತಾಯಿ ಹೊಡೆಯುತ್ತಿದ್ದಾಳೆ ಎಂದು ಹೇಳಿತು ತಾಯಿ ಜಿಂಕೆ. ಮರಿ ಜಿಂಕೆ ಇನ್ನಷ್ಟು ಹೆದರಿತು, ಅವರು ಮತ್ತೆ ಮುಂದೆ ನಡೆದರು. ಯಾರೋ ಇಬ್ಬರು ಏನನ್ನೋ ಹೆಗಲ ಮೇಲಿನ ಚೀಲದಲ್ಲಿ ತುಂಬಿಕೊಂಡು ಓಡಿ ಹೋಗುತ್ತಿದ್ದರು. ಇಲ್ಯಾಕೆ ಇವರು ಹೀಗೆ ಅಂದಿತು ಮರಿ ಜಿಂಕೆ, ಇವರು ಕಳ್ಳರು, ಯಾರೋ ದುಡಿದು ಇಟ್ಟಿದ್ದನ್ನು ಕದು ಒಯ್ಯುತ್ತಾರೆ ಅಂದಿತ್ತು ತಾಯಿ ಜಿಂಕೆ. ಅವರು ಊರಿಗೆ ಇನ್ನೂ ಹತ್ತಿರವಾದರು, ಆಗ ಮರಿ ಜಿಂಕೆ ಜನರನ್ನು ನೋಡಿ ಯಾಕಮ್ಮ ಕೆಲವರು ದಪ್ಪ ದಪ್ಪ ಕೆಲವರು ಸಣ್ಣ ನಮ್ಮಂತೆ ಇವರೂ ಒಂದೇ ಬಗೆಯಿಲ್ಲವೇ ಎಂದು ಕೇಳಿತು. ಆಗ ತಾಯಿ, ಕೆಲವರಿಗ ಅತಿ ಆಸೆ, ತಿಂದು ತಿಂದು ಕೊಬ್ಬಿದ್ದಾರೆ. ಕೆಲವರಿಗೆ ಒಂದು ಹೊತ್ತಿಗೂ ಊಟವೇ ಇಲ್ಲವೆಂದು ಕೊರಗಿದ್ದಾರೆ ಎಂದು ಹೇಳಿತು.

ಇದೆಲ್ಲವನ್ನು ನೋಡಿದ ಮರಿ ಜಿಂಕೆ ಬಾರಮ್ಮ ಕಾಡಿಗೆ ಹೋಗೋಣ ಅಂತ ಹೇಳಿತು. ತಾಯಿಗೆ ಅರ್ಥವಾಯಿತು, ದಾರಿಯಲ್ಲಿ ಮರಿ ಜಿಂಕೆ ಮನುಷ್ಯನು ಎಲ್ಲಾ ಪ್ರಾಣಿಗಳಿಗಿಂತ ಶ್ರೇಷ್ಠ ಅಂತ ಅಪ್ಪ ಹೇಳ್ತಿದ್ರು. ಆದರೆ ಇವರೇನಮ್ಮ ಹೀಗೆ ಆಡ್ತಿದ್ದಾರೆ ಅಂತ ಕೇಳಿತು. ನೀನು ನೋಡಿದ್ದು ಒಂದಿಷ್ಟು ಮಾತ್ರ ಕಂದ, ಅವರ ಲೋಕವೇ ವಿಚಿತ್ರ. ಈಗ ನಮ್ಮನ್ನು ಕಂಡರೆ ಬಿಡಲಾರರು, ಅವರು ಬರೀ ಸ್ವಾರ್ಥಿಗಳು, ತಾವು ಮಾತ್ರ ಉಳಿಯಬೇಕು ಎನ್ನುವುದು ಅವರ ಆಸೆ. ಮನುಷ್ಯ ಮನುಷ್ಯರ ಮಧ್ಯೆಯೂ ಸ್ವಾರ್ಥ ಬುದ್ಧಿಯೆ, ಈ ಲೋಕದಲ್ಲಿ ಮನುಷ್ಯರಿಗೆ ನೆಮ್ಮದಿ ಇಲ್ಲ. ಮಾಡಿದ್ದು ಉಣ್ಣಲೇ ಬೇಕಲ್ಲವೇ ಎಂದಿತು ತಾಯಿ ಜಿಂಕೆ. ಮರಿ ಜಿಂಕೆ ಬೇಗ ಬೇಗ ಹೆಜ್ಜೆ ಹಾಕತೊಡಗಿತು. ಅದರ ಹೆಜ್ಜೆಗಳಲ್ಲಿ ಬೇಗ ಕಾಡು ಸೇರುವ ತವಕವಿತ್ತು. ಈ ಕಥೆಯಿಂದ ತಿಳಿದು ಬಂದ ಸಾರಾಂಶ ಏನೆಂದರೆ ಮನುಷ್ಯರು ಪ್ರಾಣಿಗಳಿಗಿಂತ ಶ್ರೇಷ್ಠವಾದರೂ, ಸ್ವಾರ್ಥಿಯಾಗಿರುತ್ತಾನೆ. ಆದರೆ ಕಾಡಿನ ಎಲ್ಲಾ ಪ್ರಾಣಿಗಳು ಯಾವುದೇ ಜಾತಿ, ಧರ್ಮ, ಅಸೂಯೆಗಳಿಲ್ಲದೆ ಜೊತೆಯಲ್ಲಿ ಕೂಡಿ ಬಾಳುತ್ತವೆ. ಕೂಡಿ ಬಾಳಿದರೆ ಸ್ವರ್ಗ ಸುಖ ಎಂಬ ನೀತಿಯಿರುತ್ತದೆ.